ಗೋಳನ್ನು ಹೇಳುವಂತಿಲ್ಲ. ಪ್ರತಿದಿನ ಬ್ಯಾಂಕಿಗೆ ಬಂದು ವಿಚಾರಿಸಿಕೊಂಡು ಹೋಗುತ್ತಾರೆ. ಸಾವಿತ್ರಿ ಖಾತೆ ತೆರೆದು ಐದಾರು ತಿಂಗಳುಗಳಾಗಿದ್ದವು. ಆಕೆ ಬ್ಯಾಂಕಿಗೆ ಬಂದು ಹೋಗುವುದನ್ನು ಕೃಷ್ಣಪ್ಪ ಚೇಂಬರಿನೊಳಗಿಂದ ನೋಡಿದ್ದರು. ಆಕೆ ಕೃಷ್ಣಪ್ಪರ ಕಡೆ ನೋಡುತ್ತಿರಲಿಲ್ಲ. ಇಲ್ಲದ ಉಸಾಬರಿ ಏಕೆ ಎಂದು ಅವರೂ ಮಾತನಾಡಿಸಲು ಹೋಗಲಿಲ್ಲ.

ಒಂದು ದಿನ ಕೃಷ್ಣಪ್ಪ ಗ್ರಾಹಕರ ಜೊತೆ ಮಾತನಾಡುತ್ತಿದ್ದರು. ಆಗಾಗ್ಗೆ ಚೇಂಬರಿನತ್ತ ದೃಷ್ಟಿ ಹರಿಸುತ್ತಿದ್ದ ಸಾವಿತ್ರಿ ಅವರೆಲ್ಲಾ ಹೊರಟ ನಂತರ ಒಳ ಬಂದಳು. ಕೃಷ್ಣಪ್ಪ ಕೂರಲು ಹೇಳಿದರು. ಸಾವಿತ್ರಿ ಎದುರಿದ್ದ ಕುರ್ಚಿಯಲ್ಲಿ ಕೂತಳು.

ಮಾಸಾಶನ ಬಂದಿರಲಿಕ್ಕಿಲ್ಲ, ವಿಚಾರಿಸಲು ಬಂದಿರಬಹುದೆಂದು ಕೃಷ್ಣಪ್ಪ, 'ಏನು ವಿಷಯ?' ಕೇಳಿದರು. ಆಕೆ ಅಳುಕಿದಂತಿತ್ತು.

'ಹೇಳಿ, ಏನು ಬೇಕು?'

ಸಾವಿತ್ರಿ ಸ್ವಲ್ಪ ತಡೆದು, 'ಸಾರ್, ಹಸು ಸಾಲ ಸಿಗುತ್ತಂತೆ, ಕೊಡ್ತೀರಾ?' ಕೇಳಿದಳು.

ಮಾತಲ್ಲಿ ಮೊದಲಿನ ಸಂಕೋಚ ಇರಲಿಲ್ಲ. ಫಾರಮ್ಮು ಭರ್ತಿ ಮಾಡಿಕೊಟ್ಟ ಕಾರಣಕ್ಕೆ ವಿಶ್ವಾಸ ಹುಟ್ಟಿರಬೇಕು. ಕೃಷ್ಣಪ್ಪಗೆ ಹಸು ಸಾಲ ಕೊಡುವುದರಲ್ಲಿ ತುಂಬಾ ಆಸಕ್ತಿ ಇತ್ತು. ಎರಡು ಹಸು ಸಾಕಿದರೆ ಮನೆವಾರ್ತೆ ನೋಡಿಕೊಳ್ಳಬಹುದು. ಸಾಲಕ್ಕೆ ಸಬ್ಸಿಡಿ ಇರುವುದರಿಂದ ಸಾಲ ಪಡೆಯುವವರಿಗೂ ಅನುಕೂಲ. ಆದ್ಯತಾ ವಲಯದಲ್ಲಿ ಸಾಲ ವಿತರಿಸಿದ ಹಾಗೂ ಆಗುತ್ತದೆ. ಮಹಿಳೆಯರ ಹೆಸರಲ್ಲಿ ಹಸು ಸಾಲ ಕೊಟ್ಟರೆ ವಸೂಲಿಯಾಗುವುದು ಸುಲಭ ಎಂದು ಅನುಭವದಿಂದ ಅರಿತಿದ್ದರು. ಹಸು ಸಾಲ ಕೊಡಲು ಕೆಲವು ನಿರ್ದಿಷ್ಟ ಅವಶ್ಯಕತೆಗಳಿವೆ. ಹಸು ಕಟ್ಟಲು ಕೊಟ್ಟಿಗೆ ಬೇಕು, ಮೇವಿಗೆ ಹುಲ್ಲು ಸಿಗಬೇಕು, ನೀರಿನ ಅನುಕೂಲವಿರಬೇಕು. ಇವೆಲ್ಲ ಇದ್ದರೆ ಸಾಲ ಕೊಡುವುದು ಕಷ್ಟವಲ್ಲ.

'ಶೆಡ್ ಕಟ್ಟಲು ಜಾಗ ಇದೆಯೇ?' ಕೃಷ್ಣಪ್ಪ ಕೇಳಿದರು.

'ಇದೆ ಸಾರ್. ಮೂರು ವರ್ಷದ ಹಿಂದೆ ಎಮ್ಮೆ ಕಟ್ಟಿದ್ದೆ'

ಸಾಲ ಮಂಜೂರು ಮಾಡುವ ಮೊದಲು ಖುದ್ದಾಗಿ ಸ್ಥಳ ಪರೀಕ್ಷೆ ಮಾಡಬೇಕಿತ್ತು.

'ಜಾಗ ನೋಡಬೇಕು. ಅಡ್ರೆಸ್ ಕೊಡಿ' ಎಂದರು. ಕೃಷ್ಣಪ್ಪ ಸಾವಿತ್ರಿಯನ್ನು ಕಳಿಸಿದ ನಂತರ ಯೋಚಿಸಿದರು. ಬ್ಯಾಂಕಿನ ಗ್ರಾಮೀಣಾಭಿವೃದ್ಧಿ ಅಧಿಕಾರಿಗೆ ವರ್ಗವಾಗಿತ್ತು. ಹಳ್ಳಿಯೂ, ನಗರವೂ ಅಲ್ಲದ ಆ ಊರಿಗೆ ಬರಲು ಯಾರೂ ಸಿದ್ಧರಿರಲಿಲ್ಲ. ಮ್ಯಾನೇಜರೇ ಗ್ರಾಮೀಣಾಭಿವೃದ್ಧಿ ಅಧಿಕಾರಿಯ ಕೆಲಸ ಮಾಡುವಂತಾಗಿತ್ತು. ಸಾವಿತ್ರಿಯ ಮನೆ ಹುಡುಕಿ ಹೋಗುವುದು ಅನವಶ್ಯ ಮಾತುಗಳಿಗೆ ಕಾರಣವಾಗಬಹುದೆಂದು ಅನ್ನಿಸಿತು. ತಮ್ಮ ಜೊತೆ ರಾಜುಗೆ ಬರಹೇಳಿದರು. ಅವನಿಗೆ ಆಸಕ್ತಿ ಇರಲಿಲ್ಲ. 'ಅವರ್ಗೆಲ್ಲ ಹಸು ಯಾಕೆ ಸಾರ್' ಅಸಹನೆಯಿಂದ ಹೇಳಿದ. 'ಇರಲಿ ಬಿಡಿ ರಾಜು, ಸಬ್ಸಿಡಿ ಸಿಗುತ್ತಲ್ಲಾ, ಬ್ಯಾಂಕಿಗೆ ನಷ್ಟ ಅಂತೂ ಇಲ್ಲ' ಅವನನ್ನು ಒಪ್ಪಿಸಿದರು. ಸಾವಿತ್ರಿಯ ಮನೆ ಊರ ಅಂಚಿಗೆ ಇತ್ತು. ಒಂಟಿ ಮನೆಯಲ್ಲ. ಸುತ್ತ ಏಳೆಂಟು ಮನೆಗಳಿದ್ದವು. ಸಾವಿತ್ರಿಯ ಸುಣ್ಣ ಬಳಿದ ಮಣ್ಣಿನ ಮನೆಯ ಪಕ್ಕ ವಿಶಾಲವಾದ ಜಾಗವಿತ್ತು. ಅಲ್ಲಿ ಹುಲ್ಲು ಬೆಳೆದಿದ್ದನ್ನು ಕೃಷ್ಣಪ್ಪ ಗಮನಿಸಿದರು.

ಸಾವಿತ್ರಿ ಮನೆಯಲ್ಲಿದ್ದಳು. ರಾಜು ಕರೆದಾಗ ಸಾವಿತ್ರಿ, ಮಗಳು ಇಬ್ಬರೂ ಬಂದರು. ಕೃಷ್ಣಪ್ಪ ಶೆಡ್ ತೋರಿಸಲು ಹೇಳಿದರು. ಮನೆಯ ಒತ್ತಿನಲ್ಲಿ ಚಿಕ್ಕ ಶೆಡ್ ಇದ್ದು ಎಮ್ಮೆ ಕಟ್ಟಿದ್ದ ಕುರುಹುಗಳಿತ್ತು. ಮನೆಯ ಹೆಂಚುಗಳು ಅಲ್ಲಲ್ಲಿ ಬಿದ್ದು ಹೋಗಿದ್ದರೆ, ಶೆಡ್ಡಿನ ಚಾವಣಿ ಸರಿ ಇರಲಿಲ್ಲ. ನೆಲ ಮಟ್ಟಸವಾಗಿರಲಿಲ್ಲ.

'ಮೇಲ್ಚಾವಣಿ ರಿಪೇರಿ ಮಾಡಬೇಕು, ನೆಲಕ್ಕೆ ಕಲ್ಲು ಚಪ್ಪಡಿ ಹಾಕಿಸಬೇಕು. ಸೀಮೆ ಹಸು ಎಮ್ಮೆ ಸಾಕಿದ ಹಾಗಲ್ಲ' ಸಾವಿತ್ರಿ ಮಾತನಾಡಲಿಲ್ಲ.

'ಅಷ್ಟು ಮಾಡುವುದಿದ್ದರೆ ಹೇಳಿ' ಎನ್ನುತ್ತಾ ಬೈಕಿನ ಹತ್ತಿರ ಹೋದರು. ಸಾವಿತ್ರಿ ಹಿಂಬಾಲಿಸಿ, ಏಳೆಂಟು ದಿನ ಬಿಟ್ಟು ಬರುತ್ತೇನೆ ಅಂದಳು. ಬೈಕಲ್ಲಿ ಹಿಂದೆ ಕೂತ ರಾಜು ಕಣಿ ಹೇಳುವವನಂತೆ, ಆಕೆ ಬಂದೇ ಬರುತ್ತಾಳೆ ಎಂದ. ಹೇಗೆ ಹೇಳುತ್ತೀರಿ? ಕೇಳಿದರೆ ಸುಮಾರು ವರ್ಷ ಮುದುಕ ಜಮೀನ್ದಾರನೊಬ್ಬನ ಜತೆ ಇದ್ದಳು. ಆ ಹೆಣ್ಣು ಮಗಳೂ ಅವನದೇ ಅಂತಾರೆ. ಅವನು ಸಾಯುವ ಮೊದಲು ಮನೆ ಮಾಡಿಕೊಂಡಿದಾಳೆ. ಶೆಡ್ಡಿಗೆ ಏನೋ ಮಾಡುತ್ತಾಳೆ ಅಂದ.

'ಏನೋ ಅಂದರೆ ಏನು ಮಾಡುತ್ತಾಳೆ?'